ಕಾರ್ಮಿಕರಿಗೆ ವೇತನ ನೀಡದಿರುವುದು

385(3976); ಶ್ರೀ ವಾಸು (ಚಾಮರಾಜ)

ಅ) ಮೈಸೂರಿನ ಫಾಲ್ಕನ್‌ಟೈರ್ ಲಿ., ಕಂಪನಿ ಕಾರ್ಮಿಕರಿಗೆ ಮೂರು ತಿಂಗಳಿಂದ ವೇತನ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಆ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು

ಇ) ಈ ಸಂಸ್ಥೆಯ ಆರ್ಥಿಕ ಹೊಣೆಗಾರಿಕೆ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ?

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಅ) ಮೈಸೂರಿನ ಫಾಲ್ಕನ್ ಟೈರ್ ಲಿ, ಈ ಕಾರ್ಖಾನೆಯ ಕಾರ್ಮಿಕರಿಗೆ ಮಾರ್ಚ್ 2014ರವರೆಗೆ ಪೂರ್ಣ ವೇತನವನ್ನು ಪಾವತಿಸಲಾಗಿದೆ. ಏಪ್ರಿಲ್–2014ರ ವೇತನದ ಶೇಕಡ 50ರಷ್ಟನ್ನು ಕಾರ್ಮಿಕರಿಗೆ ದಿನಾಂಕ: 09–05–2014 ರಂದು ಹಾಗೂ ಬಾಕಿ ಉಳಿದ ಶೇಕಡ 50 ರಷ್ಟು ವೇತನವನ್ನು ದಿನಾಂಕ: 15–05–2014 ಪಾವತಿಸಲಾಗಿದೆ. ಮೇ 2014ರ ತಿಂಗಳ ವೇತನವನ್ನು ಪೂರ್ಣವಾಗಿ ದಿನಾಂಕ: 09–06–2014 ರಂದು ಪಾವತಿಸಲಾಗಿದೆ ಜೂನ್ 2014ರ ತಿಂಗಳ ವೇತನದ ಶೇಕಡ 50 ರಷ್ಟನ್ನು ದಿನಾಂಕ: 09–07–2014 ರಂದು ಪಾವತಿಸಲಾಗಿದ್ದು. ಬಾಕಿ ಉಳಿದ ಶೇಕಡ 50 ರಷ್ಟು ವೇತನವನ್ನು ಪಾವತಿಸಬೇಕಾಗಿರುತ್ತದೆ.

ಆ) ಏಪ್ರಿಲ್ 2014ರ ವೇತನವನ್ನು ನಿಗಧಿತ ಅವಧಿಯಲ್ಲಿ ಪಾವತಿಸಿಲ್ಲದಿರುವ ಬಗ್ಗೆ ಮತ್ತು ಜೂನ್ 2014ರ ವೇತನಕ್ಕೆ ಸಂಬಂಧಿಸಿದಂತೆ ಬಾಕಿ ಉಳಿದ ಶೇಕಡ 50 ರಷ್ಟು ವೇತನವನ್ನು ನಿಗಧಿತ ಅವಧಿಯಲ್ಲಿ ಪಾವತಿಸಿಲ್ಲದಿರುವ ಕುರಿತು ವೇತನ ವಿಳಂಬಕ್ಕೆ ಪರಿಹಾರವನ್ನು ನೀಡುವ ಕುರಿತು ಆಡಳಿತ ವರ್ಗದವರಿಗೆ ವೇತನ

ಸಂದಾಯ ಕಾಯ್ದೆ, 1936ರಂತೆ ನೋಟಿಸ್‌ನ್ನು ಜಾರಿ ಮಾಡಲಾಗಿದೆ. ಈ ಕುರಿತು ಅವಶ್ಯಕ ಕಾನೂನು ಕ್ರಮಗಳನ್ನು ಜರುಗಿಸಲಾಗುವುದು.

ಇ) ಕಾರ್ಖಾನೆಯ ಆಡಳಿತವರ್ಗ ಹೊಸದಾಗಿ ಪ್ಯಾಸೆಂಜರ್ ಕಾರ್ ರೇಡಿಯಲ್ ಟೈರ್ಸ್ ಪ್ರಾಜೆಕ್ಟ್‌ನ್ನು ಪ್ರಾರಂಭಿಸಿದ್ದು, ಸದರಿ ಪ್ರಾಜೆಕ್ಟ್‌ನ್ನು ಪ್ರಾರಂಭಿಸಲು ಮಾರ್ಚ್ 2010ನೇ ಸಾಲಿನಲ್ಲಿ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಮುಂಬೈ ಇವರಿಂದ ₹ 100 ಕೋಟಿ ಮತ್ತು ಮಾರ್ಚ್–2010ರಲ್ಲಿ ಮೈಸೂರುನಲ್ಲಿರುವ ಸೌತ್‌ಇಂಡಿಯಾ ಬ್ಯಾಂಕ್‌ನಿಂದ ₹ 50 ಕೋಟಿ ಹಾಗೂ ಜೂನ್–2010ರಲ್ಲಿ ಮೈಸೂರಿನಲ್ಲಿರುವ ಸಿಂಡಿಕೇಟ್ ಬ್ಯಾಂಕ್‌ನಿಂದ ₹ 50 ಕೋಟಿಗಳನ್ನು (ಒಟ್ಟು ₹ 200 ಕೋಟಿಗಳು) ಸಾಲವಾಗಿ ಪಡೆಯಲಾಗಿದೆ. ಹೊಸದಾಗಿ ಆರಂಭಿಸಿದ ಪ್ರೋಜೆಕ್ಟ್‌ನಲ್ಲಿ ಉತ್ಪಾದನೆ ಕಾರ್ಯ ಸಂಪೂರ್ಣವಾಗಿ ವಿಫಲವಾಗಿರುವುದರಿಂದ, ಮೂಲ ಸಂಸ್ಥೆಯಾದ ಫಾಲ್ಕನ್ ಟೈರ್ ಲಿ., ಸಂಸ್ಥೆ ಉತ್ಪಾದನೆಯಿಂದ ಬಂದ ಲಾಭದ ಹಣದಿಂದ ಬ್ಯಾಂಕ್‌ಗಳಿಂದ ಪಡೆದ ಸಾಲವನ್ನು ಮರುಪಾವತಿ ಮಾಡಿದ್ದರಿಂದ ಆರ್ಥಿಕ ಸಮಸ್ಯೆ ಉಂಟಾಗಿರುತ್ತದೆ ಎಂದು ವರದಿಯಾಗಿದೆ.

ಗೌರಮ್ಮನ ಕೆರೆ ಮತ್ತು ಹೊಂಬಾಳಮ್ಮನ ಪೇಟೆ ಕೆರೆಗಳ ಅಭಿವೃದ್ಧಿ

386(1014); ಶ್ರೀ ಬಾಲಕೃಷ್ಣ ಹೆಚ್.ಸಿ.

ಅ) ಮಾಗಡಿ ಪಟ್ಟಣದ ಗೌರಮ್ಮನಕೆರೆ ಮತ್ತು ಹೊಂಬಾಳಮ್ಮನಪೇಟೆ ಕೆರೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು;

ಆ) ಇವುಗಳಿಗಾಗಿ ಎಷ್ಟು ಹಣ ಮಂಜೂರಾಗಿದೆ; ಯಾವ ಯಾವ ಇಲಾಖೆಗಳಿಂದ ಮಂಜೂರಾಗಿದೆ;

ಇ) ಹಾಗಿದ್ದಲ್ಲಿ, ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; ಎಷ್ಟು ಹಣ ಖರ್ಚಾಗಿದೆ (ವಿವರ ನೀಡುವುದು);